# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/123/16-17

ದಿನಾಂಕ :20-10-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ನರೇಂದ್ರನಾಥ ತಂದೆ ಲೇಟ್ ಶೇಷಪ್ಪ<br>ವೈಬೂದಿಹಾಳ್ ಕ್ಯಾಂಪ್ ಬಳ್ಳಾರಿ ತಾಲೂಕು ಬಳ್ಳಾರಿ<br>ಜಿಲ್ಲಾ<br><br>**ಶ್ರೀ ಪರ್ವತರೆಡ್ಡಿ ವಕೀಲರು ಬಳ್ಳಾರಿ** | 1) ತಹಶೀಲ್ದಾರರು ಬಳ್ಳಾರಿ<br>2)ಕಂದಾಯನಿರೀಕ್ಷರು ಬಳ್ಳಾರಿ<br>3) ತಾಲೂಕು ಸರ್ವೆಯರ್<br>4)ಶ್ರೀಮತಿ ಅನುಸೂಯಮ್ಮ ಗಂಡ ಸುಧಾಕರ<br>5)ಶ್ರೀ ಸ್ವರೂಪಾನಂಧ ತಂದೆ ಸುಧಾಕರ<br>6)ಶ್ರೀ ವಿವೇಕಾನಂದ ತಂದೆ ಸುದಾಕರ<br>ಎಲ್ಲಾರ ವಾಸ ಹಗರಿ ಮಾರೆಪ್ಪ ಕಾಂಪೌಂಡ್ ರಾಘವೇಂದ್ರ ಟಾಕಿಸ್ ಹಿಂದುಗಡೆ ಬಳ್ಳಾರಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಎತ್ತಿನಬೂದಿಹಾಳು | 52 ಮತ್ತು 48 | 5x4 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ತಹಶೀಲ್ದಾರರು ಬಳ್ಳಾರಿ ಇವರ ಆದೇಶ ಸಂ/ಕಂ/ನಿರಾವರಿ/54/16-17 ದಿನಾಂಕ 22-08-2016 ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 29-09-2016 ಮತ್ತು 20-10-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳ ಪರ ವಕೀಲರು ಮುಖಾಂತರ ದಿನಾಂಕ: 20-10-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಎತ್ತಿನಬೂದಿಹಾಳು ಗ್ರಾಮದ ಸ.ನಂ 52 ಮತ್ತು 48 ವಿಸ್ತೀರ್ಣ: 5x4 ಎಕರೆ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು ಬಳ್ಳಾರಿ ಇವರ ಆದೇಶ ಸಂ/ಕಂ/ನಿರಾವರಿ/54/16-17 ದಿನಾಂಕ 22-08-2016 ಆದೇಶ ಪಡೆದ ಪ್ರತಿವಾದಿ 4 ರಿಂದ 6 ರವರು ಸದರಿ ವಿವಾದಾಸ್ಪದ ಜಮೀನಿನಲ್ಲಿ 5x4 ವಿಸ್ತೀರ್ಣದ ಕಟ್ಟಡವನ್ನು ನಿರ್ಮಾಣಮಾಡಿ ಸುಮಾರು 4 ರಿಂದ 5 ಪಂಪ್ ಸೆಟ್ ಗಳನ್ನಿರಿಸಿ, ಅನಧಿಕೃತ ವಿದ್ಯುತ್ ಸಂಪರ್ಕ ಪಡೆದು, ಪೈಪ್ ಲೈನ್ ಮುಖಾಂತರ HLC ಕಾಲುವೆಯಿಂದ ಅನಧಿಕೃತವಾಗಿ ನೀರನ್ನು ಎತ್ತುವಳಿ ಮಾಡುತ್ತಿರುವುದನ್ನು ತಡೆದು, ತಹಶೀಲ್ದಾರರು ಬಳ್ಳಾರಿ ಇವರ ಆದೇಶ ಸಂ/ಕಂ/ನಿರಾವರಿ/54/16-17 ದಿನಾಂಕ 22-08-2016 ನ್ನು ರದ್ದು ಪಡಿಸುವಂತೆ ಕೋರಿರುತ್ತಾರೆ.

ಮುಂದುವರೆದು ಸದರಿ ವಿವಾದಕ್ಕೆ ಸಂಬಂಧಿಸಿದಂತೆ ಈ ನ್ಯಾಯಾಲಯದ ತಡೆಯಾಜ್ಞೆ ಇದ್ದಾಗ್ಯೂಸಹಾ ಪ್ರತಿವಾದಿಗಳು HLC ಕಾಲುವೆಯಿಂದ ಅನಧಿಕೃತವಾಗಿ ಕಾಲುವೆನೀರು ಎತ್ತುವಳಿ ಮಾಡುತ್ತಿರುವುದು ವಿಚಾರಣೆ ದಿನಾಂಕ 29-09-2016 ರ ವಿಚಾರಣೆಯಲ್ಲಿ ವಾದಿಗಳ ಪರವಕೀಲರು ಸಲ್ಲಿಸಿದ ದಾಖಲೆಗಳಿಂದ ಕಂಡು ಬಂದಿರುತ್ತದೆ. ಕಾರಣ ಸದರಿ ವಿವಾದಾಸ್ಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಆದೇಶ.

**ಮುಂದಿನ ಪುಟಕ್ಕೆ.....**